# 51 ಸಾವಿರ ಟನ್ ಬೇಳೆ ದಾಸ್ತಾನು

ಬೇಳೆಕಾಳು ಕೊರತೆ ಉಂಟಾಗದಂತೆ ಸೂಕ್ತ ಪ್ರಮಾಣದಲ್ಲಿ ದಾಸ್ತಾನು ಮಾಡಲು ಭಾರತೀಯ ಆಹಾರ ನಿಗಮ (ಎಫ್‌ಸಿಐ) ಮುಂದಾಗಿದ್ದು, ಈಗಾಗಲೇ 51,000 ಟನ್ ಮುಂಗಾರು ದ್ವಿದಳ ಧಾನ್ಯಗಳನ್ನು ರೈತರಿಂದ ಖರೀದಿಸಿದೆ.

240 ಕೋಟಿ ರೂ.ಗಳ ಬಜೆಟ್‌ನಲ್ಲಿ ಹೆಸರು, ತೊಗರಿ, ಕಡಲೆ ಬೇಳೆ ಸೇರಿದಂತೆ ದವಿದಳ ಧಾನ್ಯಗಳನ್ನು ಎಫ್‌ಸಿಐ ಖರೀದಿಸಿ ದಾಸ್ತಾನು ಮಾಡಿದೆ. ಮತ್ತೊಂದು ಕಡೆ ಮಾರುಕಟ್ಟೆಯಲ್ಲಿ ಕೊರತೆಯಾಗದಂತೆ ಮತ್ತು ದರಗಳು ದೊಡ್ಡ ಪ್ರಮಾಣದಲ್ಲಿ ಏರುಪೇರಾಗದಂತೆಯೂ ನಿಗಾ ವಹಿಸಿದೆ. ಇವೆಲ್ಲದರ ಜತೆಗೆ ಬೇಳೆಕಾಳುಗಳನ್ನು ಆಮದು ಮಾಡಿಕೊಂಡು ಹೆಚ್ಚಿನ ದಾಸ್ತಾನು ಮಾಡಲು ಸರಕಾರ ಮುಂದಾಗಿದೆ.

ಆಧಾರ : ವಿಜಯ ಕರ್ನಾಟಕ